ಅಧ್ಯಕ್ಷರು: ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ, ಪ್ರಸ್ತಾವ ಏನೆಂದರೆ, "That in clause (2) for the Word "Board" the words "Only Bagalkot Town Development Authority shall be substituted".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು: "ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ-1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, 'ಮೊದಲನೆಯ ಖಂಡ ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, 2001ನೇ ಸಾಲಿನ ಕರ್ನಾಟಕ ಮೇಲ್ಪಾಟು ಮಂಡಳಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಆದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2001ನೇ ಸಾಲಿನ ಕರ್ನಾಟಕ ಮೇಲ್ಪಾಟು ಮಂಡಳಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

5. ಮಂತ್ರಿಗಳ ಹೇಳಿಕೆ:

ವಿಷಯ: ಇತ್ತೀಚಿನ ಕೆಲವು ದಿನಗಳಲ್ಲಿ ವಾಹನ ಅಪಘಾತಗಳು ಸಂಭವಿಸುತ್ತಿರುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ ಇತ್ತೀಚಿನ ಕೆಲವು ದಿನಗಳಲ್ಲಿ ವಾಹನ ಅಪಘಾತಗಳು

ಸಂಭವಿಸುತ್ತಿರುವುದನ್ನು ನಾನು ಅತ್ಯಂತ ವಿಷಾದದಿಂದ ಗಮನಿಸುತ್ತಿದ್ದೇನೆ. ಅದರಲ್ಲೂ ನಿನ್ನೆ ಪತ್ರಿಕೆಗಳಲ್ಲಿ ವರದಿಯಾದ ದಯನೀಯ : ಘೋರವಾದ ರಸ್ತೆ ಅಪಘಾತಗಳು ಎಲ್ಲರ ಮನಸ್ಸನ್ನು ಕಲುಕಿದೆ. ಈ ರಸ್ತೆ ಅಪಘಾತಗಳನ್ನು ತಡೆಗಟ್ಟಲು ರಾಜ್ಯ ಸರ್ಕಾರವು ಹಲವಾರು ರೀತಿಯಿಂದ ಕ್ರಮ ಕೈಗೊಳ್ಳುತ್ತಿದೆಯೆಂದು ಹೇಳಬಯಸುತ್ತೇನೆ.

ರಾಜ್ಯದಲ್ಲಿ ಅದರಲ್ಲೂ ನಗರ ಪ್ರದೇಶಗಳಲ್ಲಿ ವಾಹನಗಳ ಸಂಖ್ಯೆ ಅತೀ ವೇಗದಲ್ಲಿ ಹೆಚ್ಚಾಗುತ್ತಿದ್ದು ಈಗ ಎಲ್ಲ ತರಹದ ವಾಹನಗಳ ಸಂಖ್ಯೆ 36 ಲಕ್ಷವಾಗಿದೆ. ಅಪಘಾತ ಸಂಭವಿಸಲು ಮುಖ್ಯವಾದ ಕಾರಣಗಳು ಯಾವುದೆಂದರೆ ರಸ್ತೆ ನಿಯಮಗಳನ್ನು ಗಮನಿಸದೇ ಅತೀ ವೇಗದಿಂದ ವಾಹನ ಚಲಿಸುವುದು, ಮದ್ಯಪಾನ ಮಾಡಿ ವಾಹನ ಚಲಿಸುವುದು, ಅತೀ ಹೆಚ್ಚು ಭಾರ ಹೇರುವುದು ಇದರೊಂದಿಗೆ ಕೆಟ್ಟ ರಸ್ತೆಗಳು ಕೂಡ ಕಾರಣವಾಗುತ್ತವೆ. ರಸ್ತೆ ಅಪಘಾತಗಳಿಗೆ ಕಾರಣವಾಗುವ ಈ ನಿಯಮ ಉಲ್ಲಂಘನೆ ಪ್ರಕರಣಗಳನ್ನು ತಡೆಗಟ್ಟಲು ಇಲಾಖೆಯು ಸಾಕಷ್ಟು ಪ್ರವರ್ತನೆ : ಜಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. 2000ನೇ ವರ್ಷದಲ್ಲಿ ಸಾರಿಗೆ ಇಲಾಖೆಯು 3,90,925 ವಾಹನಗಳನ್ನು ತಪಾಸಣೆ ಮಾಡಿ ಅವುಗಳಲ್ಲಿ 10,123 ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡು ತೆರಿಗೆ ಮತ್ತು ದಂಡದ ರೂಪದಲ್ಲಿ ರೂ. 15.43 ಕೋಟಿಗಳನ್ನು ವಸೂಲು ಮಾಡಿರುತ್ತದೆ. ಇದಲ್ಲದೆ, ವಾಹನ ಚಾಲಕರ ಚಾಲನಾ ಅನುಜ್ಞಾ ಪತ್ರವನ್ನು ನೀಡುವಾಗ ಕಟ್ಟುನಿಟ್ಟಾದ ತಪಾಸಣಾ ಕ್ರಮವನ್ನು ಅನುಸರಿಸಲಾಗುತ್ತಿದೆ. ಹೆಚ್ಚುವರಿ ಭಾರವನ್ನು ಕೊಂಡೊಯ್ಯುವ ಸರಕು ವಾಹನಗಳ ತಪಾಸಣೆ, ಆಯಸ್ಸು ಮೀರಿದ ವಾಹನಗಳ ಅರ್ಹತೆಯನ್ನು ಕಟ್ಟುನಿಟ್ಟಾಗಿ ತಪಾಸಣೆ ಮಾಡುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರಸ್ತೆ ಸುರಕ್ಷತಾ ಸಪ್ತಾಹಗಳನ್ನು ಜರುಗಿಸುವುದು ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಹಾಗೂ ಶಾಲಾ ಮಕ್ಕಳಿಗೆ ಸುರಕ್ಷತಾ ಕ್ರಮ ಹಾಗೂ ಇತರ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ ನೀಡುವುದು, ಚಾಲಕರ ಕಣ್ಣು ಪರೀಕ್ಷೆ ಮಾಡುವುದು ವಾಹನಗಳ ಅರ್ಹತೆ ಬಗ್ಗೆ ಸಂಪೂರ್ಣ ತಪಾಸಣೆ ಹಾಗೂ ಚಾಲಕರಿಗೆ ಮತ್ತು ರಸ್ತೆ ಉಪಯೋಗಿಸುವ ಇತರರಿಗೆ ಒಂದು ರೆಫ್ರೆಷರ್ ಕೋರ್ಸ್‌ಗಳನ್ನು ಜರುಗಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಇತ್ತೀಚೆಗೆ ಸರ್ಕಾರ ಒಂದು ಮಹತ್ವದ ನಿರ್ಧಾರ ಕೈಗೊಂಡು ರಸ್ತೆ ಅಪಘಾತಗಳಿಗೆ ಕಾರಣಗಳಲ್ಲಿ ಒಂದಾದ ವಾಹನ ಚಾಲನೆ ಮಾಡುವಾಗ ಮೊಬೈಲ್ ಫೋನ್ ಉಪಯೋಗಿಸುವುದನ್ನು ನಿಷೇಧಿಸಿದೆ.

ರಾಜ್ಯದ ರಸ್ತೆ ಸಂಚಾರ : ಸಾಗಾಣಿಕೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿರುವ ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸುರಕ್ಷತೆಗೆ ಅತ್ಯಂತ ಮಹತ್ವ ನೀಡುತ್ತಿದ್ದು ದೇಶದಲ್ಲಿ ಅತೀ ಕಡಿಮೆ ಅಪಘಾತ ಪ್ರಮಾಣವನ್ನು ಹೊಂದಿರುವ ಸಂಸ್ಥೆಗಳಲ್ಲಿ ಒಂದಾಗಿದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. 1994-95 ರಲ್ಲಿ ಒಂದು ಲಕ್ಷ ಕಿ.ಮೀ.ಗೆ 0.28 ರಷ್ಟು ಇದ್ದ ಅಪಘಾತ ಪ್ರಮಾಣ ವರ್ಷೇ ವರ್ಷೇ ಕಡಿಮೆಯಾಗಿ ಈಗ 0.18ಕ್ಕೆ ಬಂದು ನಿಂತಿದೆ. ಇದೇ ರೀತಿ ಮರಣಾಂತಿಕ ಅಪಘಾತಗಳ ಸಂಖ್ಯೆ ಮತ್ತು ಮರಣದ ಸಂಖ್ಯೆ ವರ್ಷೆ ವರ್ಷೆ ಕಡಿಮೆಯಾಗುತ್ತಿದೆ. ಮತ್ತು ಇದನ್ನು ಇನ್ನೂ ಕಡಿಮೆಗೊಳಿಸುವ ದೃಷ್ಟಿಯಿಂದ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಮೋಟಾರು ವಾಹನ ಕಾಯ್ದೆಯ 215ರ ಕಲಂನಡಿ ರಾಜ್ಯ ಮಟ್ಟದಲ್ಲಿ ರಸ್ತೆ ಸುರಕ್ಷತಾ ಸಮಿತಿಯನ್ನು ನನ್ನ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಗಿದೆ. ಇದಲ್ಲದೆ, ರಾಜ್ಯದಲ್ಲಿರುವ ನಗರಗಳಿಗೂ ಸಹ ಪ್ರತ್ಯೇಕವಾದ ರಸ್ತೆ ಸುರಕ್ಷತಾ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳನ್ನು ಸಂಬಂಧಿಸಿದ ಇಲಾಖೆಗಳ ಸಹಯೋಗದೊಂದಿಗೆ ರಚಿಸಲಾಗಿದ್ದು ಸ್ಥಳೀಯ ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಹಾಗೂ ಅಪಘಾತಗಳನ್ನು ತಡೆಗಟ್ಟುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಸಭೆಯಲ್ಲಿಯೇ ಪರಿಹಾರೋಪಾಯಗಳನ್ನು ಕಂಡುಹಿಡಿದು ಅವುಗಳನ್ನು ಅನುಷ್ಠಾನಗೊಳಿಸಲು ಮುಂದೆ ಕ್ರಮ ಕೈಗೊಳ್ಳಲಾಗುತ್ತದೆ.

ರಾಜ್ಯ ಸರ್ಕಾರ ಕೈಗೊಳ್ಳುತ್ತಿರುವ ಹಲವಾರು ರಸ್ತೆ ಸುರಕ್ಷತೆ ಕಾರ್ಯಕ್ರಮಗಳ ಫಲವಾಗಿ ಅಪಘಾತಗಳ ಬಗ್ಗೆ ಮೂರು ವರ್ಷಗಳ ಅಂಕಿಸಂಖ್ಯೆಗಳನ್ನು ಗಮನಿಸಿದಲ್ಲಿ 1998ರಲ್ಲಿ 5826 ಮರಣಗಳು ಸಂಭವಿಸಿದ್ದು ಮುಂದಿನ ಎರಡು ವರ್ಷಗಳಲ್ಲಿ ವಾಹನಗಳ ಸಂಖ್ಯೆ ಅತೀವ ಹೆಚ್ಚಾಗಿದ್ದರೂ ಸಹ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ ಇಳಿಮುಖವಾಗಿ ಈ ಸಂಖ್ಯೆ ಕಳೆದ ಸಾಲಿನಲ್ಲಿ 5649 ಕ್ಕೆ ಇಳಿದಿದೆ ವಿವರ ಈ ಕೆಳಗಿನ ಪಟ್ಟಿಯಲ್ಲಿದೆ.

1) Details of the accidents and casualities for the three years in Karnataka.

Year	Fatal	Non-Fatal	Total	Killed	Injured
1998	4,931	25,496	30,427	5,826	40,855
1999	5,024	25,692	30,716	5,859	40,497
2000	4,949	26,353	31,302	5,649	41,368

3) Details of M.V. act cases

Year	Drunken driving	Rash and negligent manner	Over speeding	Haphazard parking of vehicles	Driving without licence	Over loading	Carrying articles & passengers in danger-ous manner
1998	581	9276	1668	11656	14013	2868	5252
1999	8116	124871	37508	119721	171116	43315	73759
2000	22121	113515	29048	179936	212849	39642	65836

ಮತ್ತು ಇದೇ ಸಮಯದಲ್ಲಿ ವಾಹನಗಳ ತಪಾಸಣಾ ಫಲವಾಗಿ ವಿವಿಧ ರೀತಿಯ ಸಂಚಾರ ನಿಯಮ ಉಲ್ಲಂಘನೆ ದಾಖಲು ಮಾಡಿದ ಮೊಕದ್ದಮೆಗಳು ಸಹ ಜಾಸ್ತಿ ಆಗಿವೆ ಎಂಬುದನ್ನು ಗಮನಿಸಬಹುದು. ಪೊಲೀಸ್ ಇಲಾಖೆಯ ವತಿಯಿಂದ ಬೆಂಗಳೂರು-ಮೈಸೂರು

ಮತ್ತಿತರ ಮಾರ್ಗಗಳಲ್ಲಿ ಪೊಲೀಸ್ ಗಸ್ತು ಸಂಚಾರ ಕ್ರಮದಿಂದಾಗಿ ಅಪಘಾತಗಳು ಕಡಿಮೆಯಾಗಿರುತ್ತವೆ. ರಾಜ್ಯದ ದಾರಿಗಳಲ್ಲಿ ಅದರಲ್ಲಿಯೂ ಹೆದ್ದಾರಿಗಳಲ್ಲಿ ಹೆಚ್ಚುತ್ತಿರುವ ವಾಹನ ಸಂಚಾರ ಮತ್ತು ಅಪಘಾತಗಳನ್ನು ತಡೆಯುವ ಸಲುವಾಗಿ ಸರ್ಕಾರ ರಾಷ್ಟ್ರೀಯ ಹೆದ್ದಾರಿಗಳಲ್ಲಿ 11 ಸಂಚಾರಿ ಸಹಾಯ ಠಾಣೆಗಳನ್ನು (Traffic Aid Post) ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಿದ್ದು, ಈ ಠಾಣೆಗಳಲ್ಲಿ ವೈರ್‌ಲೆಸ್ ಉಪಕರಣ ಒಳಗೊಂಡ ಅಂಬುಲೆನ್ಸ್‌ಗಳನ್ನು ಒದಗಿಸಿದ್ದು, ಈ ಠಾಣೆಗಳ ಸಿಬ್ಬಂದಿ ವರ್ಗದವರು ಅಪಘಾತ ಸ್ಥಳಕ್ಕೆ ಕೂಡಲೇ ಧಾವಿಸಿ ಅಗತ್ಯ ನೆರವು ನೀಡುವರು. ಅಪಘಾತಕ್ಕೊಳಗಾದ ವಾಹನಗಳನ್ನು ಮತ್ತು ಇತರ ಅಡೆತಡೆಗಳನ್ನು ಎತ್ತಲು ನಾಲ್ಕು ಕ್ರೇನ್‌ಗಳನ್ನು ಸಹ ಒದಗಿಸಲಾಗಿರುತ್ತದೆ. ಮಿತಿಮೀರಿದ ವಾಹನ ವೇಗವನ್ನು ಪತ್ತೆಹಚ್ಚಲು 14 ರಾಡಾರ್ ಗನ್‌ಗಳನ್ನು ಒದಗಿಸಲಾಗಿದೆ.

3) Details of Traffic Aid Posts and its function.

In view of increase in Traffic and Road accidents all over Karnataka especially on National Highways, Government of Karnataka has established 11 traffic aid posts in the following places.

I) National Highway No. 4.

a) Mulbagal

b) Hoskote

c) Nelamangala

d) Nelahal

e) Bharamasagara

f) Shiggoan

g) Kittur

h) Sankeshwar

II) National Highway No. 17

a) Hiregutti

b) Brahmavar

III) National Highway No. 13

a) Kudligi

ಮೇಲೆ ಹೇಳಿದ ಅಂಕಿ ಸಂಖ್ಯೆಗಳ ಪ್ರಕಾರ ವಾಹನ ಸಂಖ್ಯೆ ಹೆಚ್ಚುತ್ತಿರುವ ಪ್ರಮಾಣದಲ್ಲಿ ಅಪಘಾತಗಳು ಹೆಚ್ಚುತ್ತಿಲ್ಲವಾದರೂ ಈ ಅಂಶ ಸರ್ಕಾರಕ್ಕೆ ಸಮಾಧಾನ ತಂದಿರುವುದಿಲ್ಲ.

ರಾಜ್ಯದಲ್ಲಿ ಯಾವುದೇ ರೀತಿಯ ಅಪಘಾತಗಳು ಸಂಭವಿಸದೇ ಇದರ ಕಾರಣವಾಗಿ ಸಾರ್ವಜನಿಕರು ಸಾವಿಗೀಡಾಗುವುದನ್ನು ಸಂಪೂರ್ಣವಾಗಿ ತಡೆದಲ್ಲಿ ಮಾತ್ರ ಸರ್ಕಾರಕ್ಕೆ ನೆಮ್ಮದಿ ಉಂಟಾಗುತ್ತದೆ. ಇತ್ತೀಚಿನ ಕೆಲವು ದಿನಗಳಲ್ಲಿ ನಡೆದ ರಸ್ತೆ ಅಪಘಾತಗಳ ಬಗ್ಗೆ ಸರ್ಕಾರ ಸಂಪೂರ್ಣ ವಿವರ ತರಿಸಿ ಈ ಅಪಘಾತಗಳಿಗೆ ಕಾರಣವೇನೆಂಬುದನ್ನು ವಿಶ್ಲೇಷಣೆ ಮಾಡಿ ಇಂತಹ ಅಪಘಾತಗಳು ಮರುಕಳಿಸದಂತೆ ಸರ್ಕಾರ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂಬ ಭರವಸೆಯನ್ನು ನೀಡುತ್ತೇನೆ.

4.10 ಪಿ.ಎಂ.

ಶ್ರೀ ಎಸ್.ಜಿ.ಕೆಬ್. ಪ್ಯಟ್ಟಣಂಗಸಾಫ್: ಮಾನ್ಯ ಅಧ್ಯಕ್ಷರೆ, ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ಮ್ಯಾಟ್ಸ್ಕ್ಯಾಬ್‌ಗಳಲ್ಲಿ 12 ಸೀಟ್ ಇರಬೇಕೆಂದು ಮಾಡಿದ್ದೀರಿ. ಅವುಗಳನ್ನು ಓಡಿಸತಕ್ಕವರು 12 ಸೀಟಿಗೆ ಬದಲಾಗಿ 30 ಸೀಟುಗಳನ್ನು ಹಾಕತಕ್ಕದ್ದು ತಮಗೂ ಗೊತ್ತಿದೆ, ಪೊಲೀಸ್ ಇಲಾಖೆಯವರಿಗೂ ಗೊತ್ತಿದೆ. ಈ ಬಗ್ಗೆ ಎಷ್ಟು ಕೇಸುಗಳನ್ನು ರಿಜಿಸ್ಟರ್ ಮಾಡಿದ್ದೀರಿ? ಎಷ್ಟು ಮ್ಯಾಟ್ಸ್ಕ್ಯಾಬ್‌ಗಳ ಅಪಘಾತಗಳಾಗಿವೆ, ಅದರ ಬಗ್ಗೆ ಮಾಹಿತಿಯನ್ನು ಕೊಡುತ್ತೀರಾ?

ಶ್ರೀ ಕೆ.ಹೆಚ್. ಹನುಮಂಗೌಡ: ಮಾನ್ಯ ಅಧ್ಯಕ್ಷರೆ, ಆಕ್ಸಿಡೆಂಟ್ ಆಗಬೇಕಾದರೆ ಡ್ರೈವರ್‌ಗಳ ಕುಡಿತ ಕಾರಣವೆಂದು ತಾವು ಹೇಳಿದ್ದೀರಿ. ನ್ಯಾಷನಲ್ ಹೈವೇಗಳಲ್ಲಿ ಅನೇಕ ಕಡೆ ವೈನ್‌ಶಾಪ್‌ಗಳಿವೆ. ಕೊನೆಯ ಪಕ್ಷ ಈ ಆಕ್ಸಿಡೆಂಟ್‌ಗಳನ್ನು ತಪ್ಪಿಸುವ ದೃಷ್ಟಿಯಿಂದಲಾದರೂ ಆ ವೈನ್‌ಶಾಪ್‌ಗಳನ್ನು ಕ್ಲೋಸ್ ಮಾಡುವುದು ಅಥವಾ ಡ್ರೈವರ್‌ಗಳ ಕಣ್ಣಿಗೆ ಬೀಳದಹಾಗೆ ದೂರಕ್ಕೆ ಹಾಕಿಸುತ್ತೀರಾ?

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಅಧ್ಯಕ್ಷರೆ, ಮಾನ್ಯಮಂತ್ರಿಗಳ ಹೇಳಿಕೆ ನನ್ನ ಕೈಗೆ ಸಿಕ್ಕಿಲ್ಲ. ಅದರಿಂದ ಹೆಚ್ಚಿಗೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಆಗುತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ವರ್ಷ ಮತ್ತು ಕಳೆದ ವರ್ಷ ರಾಜ್ಯದಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗಿದೆ. ಮರಣಗಳು ಸಹ ಹೆಚ್ಚಾಗಿವೆ. ಪ್ರತಿಯೊಂದು ದಿನ ಪತ್ರಿಕೆಗಳ ಮುಖಪುಟದಲ್ಲಿ 10-12 ಜನ ಸಾಯುತ್ತಿರುವುದನ್ನು ಮುದ್ರಿಸಿರುತ್ತಾರೆ. ಇದರಲ್ಲಿ ಕೇವಲ ಮೋಟಾರು ವಾಹನ ಇಲಾಖೆಯ ಜವಾಬ್ದಾರಿ ಅಷ್ಟೇ ಅಲ್ಲ, ಪೊಲೀಸ್ ಇಲಾಖೆಯ ಜವಾಬ್ದಾರಿ ಬಹಳ ದೊಡ್ಡದು ಇದೆ. ಅಪಘಾತಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ. ಬಹಳ ಮುಖ್ಯವಾಗಿ, ಒಂದು ರೋಡ್ ಸೇಫ್ಟಿ ಕಮಿಟಿ ಸಾರಿಗೆ ಮಂತ್ರಿಗಳ ಅಧ್ಯಕ್ಷತೆಯಲ್ಲಿದೆ. ಅದು ಮೂರು ತಿಂಗಳಿಗೆ ಒಂದು ಸಾರಿ ಸಭೆ ಸೇರಿದೆಯೆ? ಸಭೆ ಸೇರಿದ್ದರೆ ಅದು ತೆಗೆದುಕೊಂಡಿರತಕ್ಕ ತೀರ್ಮಾನಗಳೇನು? ಏನಾದರೂ ಇಂಪ್ಲಿಮೆಂಟ್ ಆಗಿದೆಯೆ? ರಾಜ್ಯದ 27 ಜಿಲ್ಲೆಗಳಲ್ಲಿ ರೋಡ್ ಸೇಫ್ಟಿ ಕಮಿಟಿಗಳಿವೆ. ಅವರೇನು ರೆಕಮೆಂಡೇಶನ್ ಕಳುಹಿಸಿದ್ದಾರೆ? ಅವರಿಗೆ ಹಣವನ್ನು ರಿಲೀಸ್ ಮಾಡಿದ್ದೀರಾ? ಮಂತ್ರಿಗಳ ಅಂಕಿಸಂಖ್ಯೆಯ

ಪ್ರಕಾರ ಪ್ರತಿ ವರ್ಷ ಅಪಘಾತಗಳಿಂದ ಐದೂವರೆ ಸಾವಿರ ಜನ ಸಾಯುತ್ತಾರೆ. ಮರ್ಡರ್‌ನಿಂದ ಸಾಯುವವರು ಒಂದೂವರೆ ಸಾವಿರ. ಅಪಘಾತದಿಂದ ಐದೂವರೆ ಸಾವಿರ ಜನ ಸಾಯುತ್ತಿದ್ದಾರೆ. ಯಾರಾದರೂ ಧರ್ಮಸ್ಥಳಕ್ಕೋ ಇನ್ನೆಲ್ಲಿಗೋ ಹೋದರೆ ವಾಪಸ್ಸು ಬರುತ್ತಾರೋ ಇಲ್ಲವೋ ಎನ್ನುವ ಆತಂಕ ಮನೆಗಳಲ್ಲಿರುತ್ತದೆ. ಅದು ತಮಗೆ ಗೊತ್ತಿರತಕ್ಕ ವಿಚಾರ. ಪ್ರತಿನಿತ್ಯ ಆಕ್ಸಿಡೆಂಟ್‌ಗಳು ಆಗುತ್ತಿವೆ. ಇದರ ಕಡೆಗೆ ಮಾನ್ಯ ಗೃಹಮಂತ್ರಿಗಳು ಮತ್ತು ಸಾರಿಗೆ ಮಂತ್ರಿಗಳು ಒಟ್ಟಿನ ಜವಾಬ್ದಾರಿಯನ್ನು ತೆಗೆದುಕೊಂಡು ರಿವ್ಯೂ ಮಾಡಿ ಅಪಘಾತಗಳನ್ನು ಕಡಿಮೆ ಮಾಡುವುದಕ್ಕೆ ಜಿಲ್ಲಾವಾರು ಏನು ಮಾಡಿದ್ದೀರಿ ಅದು ನನಗೆ ಬೇಕಾಗಿರತಕ್ಕದ್ದು? ಸಪ್ತಾಹ ಮಾಡತಕ್ಕದ್ದು ಬ್ಯಾನರ್‌ಗಳನ್ನು ಕಟ್ಟತಕ್ಕದ್ದು ಅದು ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ಪೊಲೀಸ್ ಇಲಾಖೆಯಲ್ಲಿ ಬಹಳಷ್ಟು ಉತ್ತಮವಾದ ಅಧಿಕಾರಿಗಳು ರೋಡ್ ಸೇಫ್ಟಿ ಬಗ್ಗೆ ಅನೇಕ ಉತ್ತಮವಾದ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಕೇಂದ್ರ ಸರ್ಕಾರದವರು ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವುದಕ್ಕೆ ಕೆಲವು ರೀತಿಯಲ್ಲಿ ಸಹಾಯ ಮಾಡುವುದಕ್ಕೆ ತಯಾರಾಗಿದ್ದಾರೆ. ಅದನ್ನು ತೆಗೆದುಕೊಳ್ಳುವುದಕ್ಕೆ ಆಗಿದೆಯೆ? ನೀವು ಕಾರ್ಯಕ್ರಮಗಳನ್ನು ಏನು ಮಾಡಿದ್ದೀರಿ? ಅಪಘಾತಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ನಾನು ಮೂರು ಪುಟಗಳ ಉತ್ತರವನ್ನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ. ಪರ್ಸೆಂಟೇಜ್ ವಾಹನ ಇನ್‌ಕ್ರೀಸ್ ಆಗಿರತಕ್ಕದ್ದು ಅದೆಲ್ಲ ಇದ್ದೇ ಇದೆ. ಅದೆಲ್ಲ ರೊಟೀನ್. ನಾನು ಮೂರು ಸಾರಿ ಸಾರಿಗೆ ಮಂತ್ರಿಯಾಗಿದ್ದೆ. 1985ರಲ್ಲಿ, 1987ರಲ್ಲಿ ಮತ್ತೆ ಮೊನ್ನೆ ಒಂದು ಸಾರಿ. ಅಂಕಿಅಂಶಗಳ ನಂಬರ್ ಚೇಂಜ್ ಆಗಿದೆ ಅದೇ ಉತ್ತರ ಬಂದಿದೆ. ಅದರಿಂದ ಏನೂ ಉಪಯೋಗವಿಲ್ಲ. ಮೂರು ತಿಂಗಳಿಗೊಂದು ಸಾರಿ ರೋಡ್ ಸೇಫ್ಟಿ ಕಮಿಟಿ ಮೀಟಿಂಗ್ ಕರೆಯಿರಿ. ಅಲ್ಲಿಯ ಡಿಜಪಿಯವರನ್ನು ಕರೆಯಿರಿ. ಮತ್ತು ಈ ಜಿಲ್ಲೆಗಳಿಗೆ ಹೋದಾಗ ಎಸ್.ಪಿ. ಅಧ್ಯಕ್ಷತೆಯಲ್ಲಿ ಡಿ.ಸಿ.ಗಳನ್ನು ಕರೆಸಿ ಕಟ್ಟುನಿಟ್ಟಾದ ಸೂಚನೆಗಳನ್ನು ಕೊಡಿ. ಮೂರು ತಿಂಗಳಲ್ಲಿ ಎಲ್ಲೆಲ್ಲಿ ಅಪಘಾತಗಳಾಗಿವೆ ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಬೇಕು. ಈಗ ನಮಗೆ ಬರತಕ್ಕದ್ದು ಏನು ಎಂದರೆ ಗಾಯಾಳುಗಳು ಎಂದು ಅಲ್ಲಿ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ. ಆದಾದನಂತರ ಸತ್ತವರದ್ದು ಮಾತ್ರ ಇಲ್ಲಿ ಲೆಕ್ಕ ಇರುವುದು. 46 ಸಾವಿರ ಗಾಯಾಳುಗಳು ಅಂತ ಇಲ್ಲಿ ಏನು ಹೇಳುತ್ತಿದ್ದಾರೆ, ಅದರಲ್ಲಿ ಸಾಯುವವರ ಸಂಖ್ಯೆ ಯಾರಿಗೂ ಗೊತ್ತೇ ಇಲ್ಲ. ನಿಮಾನ್ಸ್‌ನಲ್ಲೂ ಗೊತ್ತಾಗುವುದಿಲ್ಲ, ಆಸ್ಪತ್ರೆಗಳಲ್ಲೂ ಗೊತ್ತಾಗುವುದಿಲ್ಲ. ಆದ್ದರಿಂದ ಇಡೀ ದೇಶದ್ದು - Loss prevention Society of India ಅಂತ ಹೇಳಿ ಚೆನ್ನೈನಲ್ಲಿ ಒಂದು ಆರ್ಗನೈಸೇಶನ್ ಇದೆ. ಅವರು ಈ ದೇಶದಲ್ಲಿ ಯುದ್ಧಕ್ಕಿಂತ, ಮರ್ಡರ್‌ಗಳಿಗಿಂತ ಸಾಯುವುದು, ಪ್ರಾಪರ್ಟಿ ಲಾಸ್ ಆಗುವುದು, ಅಪಘಾತಗಳು ಎನ್ನತಕ್ಕದ್ದು ಒಂದು ರಿಪೋರ್ಟ್ ಸಹ ಮಾಡಿದ್ದಾರೆ. ಅದೂ ಸಹ ಇದೆ. ಇದರ ಬಗ್ಗೆ ಒಂದು ವಿಶ್ಲೇಷಣೆ ಮಾಡಿ ಸರ್ಕಾರ ಒಂದು ದಿಟ್ಟವಾದ ಕ್ರಮವನ್ನು ತೆಗೆದುಕೊಳ್ಳಬೇಕು. The message you give should reach your Motor Vehicle Inspector and Traffic Sub-Inspector at the lower level ಆ ರೀತಿ ಒಂದು ಕಾರ್ಯಕ್ರಮ ಹಾಕಬೇಕೆಂದು ನಾನು ಆಗ್ರಹ ಮಾಡುತ್ತೇನೆ.

ಅಧ್ಯಕ್ಷರು: ಬಚ್ಚೇಗೌಡರೇ, ಹೊಸ ವಿಷಯಗಳು ಇದ್ದರೆ ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ): ಮಾನ್ಯ ಅಧ್ಯಕ್ಷರೇ, ಈ ವರ್ಷ ಪ್ರಾರಂಭವಾದಾಗಿನಿಂದ ಬರೇ ಅಪಘಾತಗಳನ್ನು ಕಾಣುತ್ತಿದ್ದೇವೆ. ಮತ್ತೆ ಹೆಚ್ಚು ಅಪಘಾತಗಳು ಕಳೆದ ಮೂರು ತಿಂಗಳಲ್ಲಿ ಆಗುತ್ತಿರುವಂಥಾದ್ದನ್ನು ನೋಡುತ್ತಿದ್ದೇವೆ. ಬೀದರ್‌ನಲ್ಲಿ ಅದಂಥ ಅಪಘಾತ, ಧಾರವಾಡ ಜಿಲ್ಲೆಯಲ್ಲಿ ಅದಂಥ ಅಪಘಾತಗಳಲ್ಲಿ ಇಡೀ ಕುಟುಂಬಗಳೇ ಹೋಗಿದ್ದನ್ನು ನೋಡುತ್ತಿದ್ದೇವೆ.

ಅಧ್ಯಕ್ಷರು: ಅದೆಲ್ಲ ಹೇಳಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮ್ಯಾಕ್ಸಿಕ್ಯಾಬ್ ಬಗ್ಗೆ ಎಷ್ಟು ಲೈಸೆನ್ಸ್‌ಗಳನ್ನು ಕೊಟ್ಟಿದ್ದೇವೆ, ಎಷ್ಟು ಪರ್ಮಿಟ್‌ಗಳನ್ನು ಕೊಟ್ಟಿದ್ದೇವೆ ಎಂದು ಮೊನ್ನೆ ದಿವಸ ಹೇಳಿದರು. ಆದರೆ ಈ ಗೂಡ್ಸ್ ವೆಹಿಕಲ್‌ಗಳಲ್ಲಿ ಜನರು ಜೋತಾಡಿಕೊಂಡು ಹೋಗುತ್ತಾರೆ, 30-40 ಜನರನ್ನು ತುಂಬಿಕೊಂಡು ಹೋಗುತ್ತಾರೆ. ಮೊನ್ನೆ ನಾನು ದೇವನಹಳ್ಳಿ ಕಡೆಯಿಂದ ಬರುತ್ತಾ ಇದ್ದಾಗ ನೋಡಿದೆ. ಮುಂದೆ ಇದ್ದ ಗೂಡ್ಸ್ ವೆಹಿಕಲ್ ಎರಡೇ ನಿಮಿಷದಲ್ಲಿ ಟಾಪಲ್ ಆಯಿತು. ವಾಹನದಲ್ಲಿದ್ದ 30 ಜನರಲ್ಲಿ ಮೂರು ಜನ ಅಲ್ಲೇ ಸತ್ತುಬಿದ್ದರು. ಈ ರೀತಿ ವಾಹನಗಳಲ್ಲಿ ಅನಧಿಕೃತವಾಗಿ ಜನರನ್ನು ಕೊಂಡೊಯ್ಯುವಂಥಾದ್ದು ಏನಿದೆ ಇದಕ್ಕೆ ಅವಕಾಶ ಕೊಡಬಾರದು. ಇನ್ನೊಂದು ವಿಷಯ ಏನೆಂದರೆ ಇವುಗಳನ್ನು ಓಡಿಸುವವರಿಗೆ ಒಬ್ಬರಿಗೂ ಲೈಸೆನ್ಸ್ ಇರುವುದಿಲ್ಲ. ಇವರೆಲ್ಲರೂ ಹುಡುಗರು ಆಗಿರುತ್ತಾರೆ. ನಮ್ಮಲ್ಲಿ ಪೆಟ್ರೋಲ್ ಟ್ಯಾಂಕರ್‌ಗಳು ಏನು ಬರುತ್ತವೆ, ಅವುಗಳನ್ನು ನಡೆಸುವ ಚಾಲಕರು ಒಬ್ಬರಿಗೂ ಲೈಸೆನ್ಸ್ ಇರುವುದಿಲ್ಲ. ಇಂತಹವರನ್ನು ತಪಾಸಣೆ ಮಾಡಿ ಅವರ ಲೈಸೆನ್ಸ್‌ಗಳನ್ನು ರದ್ದುಮಾಡಿ, ಅವುಗಳನ್ನು ಕಂಪ್ಯೂಟರ್ ವಿಂಗ್‌ನಲ್ಲಿ ಇಡುವಂಥಾದ್ದು ಆಗಬೇಕು. ಏಕೆಂದರೆ ಇಂಥವರು ಇಲ್ಲಿ ಲೈಸೆನ್ಸ್ ರದ್ದುಮಾಡಿಸಿಕೊಂಡುಹೋಗಿ ಬೆಳಗಾಮಿನಲ್ಲಿ ಲೈಸೆನ್ಸ್ ತೆಗೆದುಕೊಳ್ಳುತ್ತಾರೆ ಮತ್ತು ಅಲ್ಲಿ ಏನಾದರೂ ಆಕ್ಸಿಡೆಂಟ್ ಮಾಡಿದರೆ ಪುನಃ ಕೋಲಾರದಲ್ಲಿ ಡ್ರೈವಿಂಗ್ ಲೈಸೆನ್ಸ್ ತೆಗೆದುಕೊಳ್ಳುತ್ತಾರೆ. ಇದೇ ಒಂದು ದೊಡ್ಡ ರ‍್ಯಾಕೆಟ್ಟೇ ಇದೆ. ಇಂತಹವರಿಗೆ ಲೈಸೆನ್ಸ್ ಕೊಡುವುದು 'ಲೈಸೆನ್ಸ್ ಟು ಕಿಲ್' ಎನ್ನುವ ಹಾಗೆ ಆಗಿದೆ. ಇವರು ಇವತ್ತು ಎಲ್ಲಿ ಬೇಕಾದರೂ ಲೈಸೆನ್ಸ್ ತೆಗೆದುಕೊಳ್ಳುತ್ತಾರೆ. ಬೇರೆ ದೇಶಗಳಲ್ಲಿ ನಾವು ನೋಡಿದ್ದೇವೆ. ಅಲ್ಲಿ ಒಬ್ಬರಿಗೆ ಏನಾದರೂ ಲೈಸೆನ್ಸ್ ಹೋಯಿತು ಎಂದರೆ ಅವನಿಗೆ ಅಲ್ಲಿ ಪ್ರಜೆಯಾಗಿ ಇರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅಲ್ಲಿಯ ಜನ ಡ್ರೈವಿಂಗ್ ಲೈಸೆನ್ಸ್ ವಿಷಯದಲ್ಲಿ ಅಷ್ಟು ಭಯಪಡುತ್ತಾರೆ. ಇಲ್ಲಿ ಲೈಸೆನ್ಸ್ ಹೋದರೆ ಇನ್ನೊಂದು ಹೆಸರಿನಲ್ಲಿ ಇನ್ನೊಂದು ಕಡೆ ಲೈಸೆನ್ಸ್ ತೆಗೆದುಕೊಳ್ಳುತ್ತಾರೆ. ಆರ್.ಟಿ.ಓ. ಆಫೀಸಿಗೆ ಹೋಗಿ ಒಂದಷ್ಟು ಪ್ಯಾಕೇಜ್ ಮನಿ ಅಂತ ಕೊಟ್ಟು ಬಿಟ್ಟರೆ ಪರೀಕ್ಷೆ ಏನೂ ಮಾಡುವುದಿಲ್ಲ. ಮನೆಗೇ ಹೋಗಿ ಸಾಯಂಕಾಲ ಲೈಸೆನ್ಸ್ ಕೊಡುತ್ತಾರೆ. 300-400 ರೂಪಾಯಿಗಳಿಗೆಲ್ಲ ಹೀಗೆ ಲೈಸೆನ್ಸ್ ಸಿಗುತ್ತದೆ. ಇಂತಹ ಡ್ರೈವರ್‌ಗಳನ್ನು ತೆಗೆದುಕೊಂಡು ಹೋಗಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ, ಹೆಚ್ಚು ಟ್ರಾಫಿಕ್ ಇರುವ ಕಡೆ ಹಾಕಿದರೆ ಏನಾಗಬಹುದು? ಮಂತ್ರಿಗಳು ಒಂದು ಉತ್ತರ ಹೇಳುವುದು ಏನೆಂದರೆ ಟ್ರಾಫಿಕ್ ಒತ್ತಡ ಜಾಸ್ತಿ ಇದೆಯೆಂದು. ನಮ್ಮಲ್ಲಿ 36ಕ್ಕೂ ಜಾಸ್ತಿ ಗಾಡಿಗಳು ಇವೆಯೆಂದು ಅವರು ಹೇಳುತ್ತಾರೆ. ಹೆಂಡ, ಸಾರಾಯಿ ಕುಡಿದು ವಾಹನಗಳನ್ನು ಓಡಿಸಿದ್ದರಿಂದ ಅಪಘಾತಗಳು ಆಗಿವೆ ಎಂದರೆ, ಕುಡಿಯುವವರನ್ನು ತಪಾಸಣೆ ಮಾಡಿ. ನಿಮ್ಮ ಮೊಬೈಲ್ ಸ್ಕ್ವಾಡ್‌ಗಳು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಏನು

ಮೊಬೈಲ್ ಆಸ್ಪತ್ರೆಗಳು ಏನು ಮಾಡುತ್ತಿವೆ? ಈ ಆಸ್ಪತ್ರೆಗಳಲ್ಲಿ ಗಾಯಾಳುಗಳಿಗೆ ಶುಶ್ರೂಸೆ ಕೊಡುತ್ತಿದ್ದಾರೆಯೆ? ಗಂಟೆಗಟ್ಟಲೆ ಕಾದರೂ ಸಹ ಅಪಘಾತಗಳಲ್ಲಿ ಸಿಕ್ಕಿಹಾಕಿಕೊಂಡಿರತಕ್ಕಂಥವರಿಗೆ ಆಂಬುಲೆನ್ಸ್ ಬರುವುದಿಲ್ಲ. ಪೊಲೀಸ್ ಸ್ಟೇಷನ್‌ಗಳಲ್ಲಿ ಆಂಬುಲೆನ್ಸ್ ಕೊಡುತ್ತಾರೆ. ಆದರೆ ಅವುಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವ ವ್ಯವಸ್ಥೆ ಇಲ್ಲ. ಆದ್ದರಿಂದ ಮಾನ್ಯ ಸಿಂಪ್ಯಾರವರು ಸೂಚಿಸಿದ ಹಾಗೆ ಮೂರು ತಿಂಗಳಿಗೆ ಒಂದು ಸಾರಿ ರೋಡ್‌ಸೇಫ್ಟಿ ಮೀಟಿಂಗ್ ಆಗಬೇಕು. ಆದರೆ ಅವರಿಗೆ ಹಣ ಇಲ್ಲ. ಈ ಕಾರಣದಿಂದ ಅವರು ಮೀಟಿಂಗ್‌ನ್ನೇ ಕರೆಯುವುದಿಲ್ಲ. ನಾನು ಆರು ತಿಂಗಳು ಮಂತ್ರಿಯಾಗಿದ್ದೆ. ಅವರ ಹತ್ತಿರ ದುಡ್ಡು ಇಲ್ಲ. ಇವರ ಇಲಾಖೆಯಿಂದ ದುಡ್ಡು ಕೊಟ್ಟರೆ ಅವರು ಒಳ್ಳೆಯ ಕೆಲಸ ಮಾಡುತ್ತಾರೆ. ದಯವಿಟ್ಟು ಈ ವ್ಯವಸ್ಥೆ ಮಾಡಿದರೆ, ಸರಿಯಾದ ರೀತಿಯಲ್ಲಿ ನಿಯಂತ್ರಣ ಮಾಡಿದರೆ ಅಪಘಾತಗಳು ಕಡಿಮೆಯಾಗುತ್ತವೆ. ಇಲ್ಲದಿದ್ದರೆ ಬಹಳಷ್ಟು ಜನರು ಇದರಿಂದ ನಾಯಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ (ಬೇಮಗಲ್): ಮಾನ್ಯ ಅಧ್ಯಕ್ಷರೇ, ರಸ್ತೆಯಲ್ಲಿ ಹೋಗುವಾಗ ನಾನೇ ಆಗಲಿ, ನೀವೇ ಆಗಲಿ, ಯಾರೇಯಾಗಲಿ ನಮ್ಮ ಎದುರುಗಡೆ ಬರತಕ್ಕಂಥ, ಹೋಗತಕ್ಕಂಥ ಗಾಡಿಗಳನ್ನು ನೋಡಿದರೆ ಅವುಗಳ ಹಿಂದುಗಡೆ, ಶೇಕಡಾ 50 ಕ್ಕಿಂತಲೂ ಹೆಚ್ಚು ಗಾಡಿಗಳಲ್ಲಿ ಡೇಂಜರ್ ಲೈಟ್ ಇರುವುದಿಲ್ಲ. ನಾನು ಕಣ್ಣಲ್ಲಿ ಕಣ್ಣಿಟ್ಟು ಎಷ್ಟು ಗಾಡಿಗಳಿಗೆ ಈ ಡೇಂಜರ್ ಲೈಟ್‌ಗಳು ಇಲ್ಲವೆಂದು ನೋಡಿದ್ದೇನೆ. ನನ್ನ ಲೆಕ್ಕಾಚಾರದ ಪ್ರಕಾರ ಶೇಕಡಾ 50 ಕ್ಕಿಂತ ಹೆಚ್ಚು ಗಾಡಿಗಳಿಗೆ ಹಿಂದೆ ಡೇಂಜರ್ ಲೈಟ್ ಇರುವುದಿಲ್ಲ. ಇದಕ್ಕೆ ಸರ್ಕಾರದ ಹಣ ಕೂಡ ಖರ್ಚಾಗುವುದಿಲ್ಲ. ನೀವು ಕಡ್ಡಾಯ ಮಾಡಿ. ಯಾರು ಡೇಂಜರ್‌ಲೈಟ್ ಇಲ್ಲದೆ ಗಾಡಿಯನ್ನು ಓಡಿಸುತ್ತಾರೆ, ಅವರನ್ನು ಹಿಡಿದು ಕೇಸ್ ಹಾಕತಕ್ಕಂಥ ಕೆಲಸವನ್ನು ಮಾಡಿ. ಇದನ್ನೇ ಒಂದು ಸಪ್ತಾಹ ಅಥವಾ ಒಂದು ತಿಂಗಳು ಮಾಡಿ. ಒಂದು ವೇಳಾ ಪಟ್ಟಿಯನ್ನು ಮಾಡಿ ಇಷ್ಟನೇ ತಾರೀಖಿನ ಒಳಗೆ ಎಲ್ಲ ಗಾಡಿಗಳಿಗೂ ಕೂಡ ಡೇಂಜರ್ ಲೈಟ್ ಇರಬೇಕೆಂದು ನಿಗದಿಪಡಿಸಿ. ಈ ಕೆಲಸ ಒಂದು ಆದರೆ ನನ್ನ ಲೆಕ್ಕದಲ್ಲಿ ಶೇಕಡಾ 50 ರಷ್ಟು ಅಪಘಾತಗಳು ಕಡಿಮೆಯಾಗುತ್ತವೆ. ರಾತ್ರಿ ಹೊತ್ತೇ ಬಹಳ ಅಪಾಯ. ನೀವು ಇದನ್ನು ವಿಶ್ಲೇಷಣೆ ಮಾಡಿದರೆ ಗೊತ್ತಾಗುತ್ತದೆ. ಈ ಆಕ್ಸಿಡೆಂಟ್‌ಗಳು ಆಗತಕ್ಕದ್ದು ರಾತ್ರಿ ಹೊತ್ತಿನಲ್ಲಿ ಮತ್ತು ಇದಕ್ಕೆ ಮುಖ್ಯ ಕಾರಣವೆಂದರೆ ಡೇಂಜರ್ ಲೈಟ್ ಇಲ್ಲದೇ ಇರುವಂಥಾದ್ದು. ಆದ್ದರಿಂದ ಇದು ಒಂದು ಸಣ್ಣ ಕೆಲಸ ಮತ್ತು ಇದರಿಂದ ಸರ್ಕಾರಕ್ಕೇನೂ ಖರ್ಚಾಗುವುದಿಲ್ಲ. ದ್ವಿಚಕ್ರ ವಾಹನಗಳು, ನಾಲ್ಕು ಚಕ್ರ ವಾಹನಗಳು ಅಲ್ಲದೆ ಇಂಟರ್‌ಸ್ಟೇಟ್ ಲಾರಿಗಳಿಗೂ ಕೂಡ ಈ ಡೇಂಜರ್ ಲೈಟ್ ಇರುವುದಿಲ್ಲ.

ಅಧ್ಯಕ್ಷರು: ಟ್ರಾಕ್ಟರ್‌ಗಳಿಗೂ ಹಿಂದುಗಡೆ ಡೇಂಜರ್ ಲೈಟ್ ಇರುವುದಿಲ್ಲ.

ಶ್ರೀ ಸಿ. ಭೈರೇಗೌಡ: ದಯವಿಟ್ಟು ಇದು ಒಂದನ್ನು ಮಾಡಿ. ಇದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಹಣ ಕೂಡ ಖರ್ಚಾಗುವುದಿಲ್ಲ. ಆದ್ದರಿಂದ ಇದನ್ನು ದಯವಿಟ್ಟು ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಅಧ್ಯಕ್ಷರೇ, ಒಂದು ಸಣ್ಣ ಸಲಹೆ. ಮಾನ್ಯ ಸದಸ್ಯರು ಡೇಂಜರ್ ಲೈಟ್ ಬಗ್ಗೆ ಹೇಳಿದರು. ಈಗೆಲ್ಲ ಹಾಲೋಜಿನ್ ಬಲ್ಬ್‌ಗಳು ಬಂದು ಎದುರುಗಡೆ

ವಾಹನ ಬಂದರೆ ಅದನ್ನು ನೋಡಿ ಕಣ್ಣಿಗೆ ಕತ್ತಲೆ ಕವಿದಂತಾಗುತ್ತದೆ. ಈಗೇನು ಯಾವುದೋ ಒಂದು ಪಾರದಲ್ಲಿ ವಾಹನಗಳ ಹೆಡ್‌ಲೈಟ್‌ಗಳಿಗೆ ಅಧಿಕಭಾಗ ಕಪ್ಪುಬಣ್ಣ ಹಚ್ಚುತ್ತೀರಿ, ಇದು ಒಂದು ದಿವಸ ಮಾತ್ರ ಆಗಬಾರದು. ಖಾಯಂ ಆಗಿ ಲೈಟ್ ಎಷ್ಟು ಇರಬೇಕೆಂದು ಏನು ನಿಗದಿ ಮಾಡಿದ್ದೀರಿ, ಆ ಪ್ರಕಾರ ಎಲ್ಲ ವಾಹನಗಳು ಇರಬೇಕು. ಆ ಪ್ರಕಾರ ಇಲ್ಲದಿರುವ ಎಲ್ಲ ವಾಹನಗಳನ್ನೂ ಹಿಂಡಿದು ಕೇಸ್ ಹಾಕಬೇಕು. ಇನ್ನೊಂದು ಎಂದರೆ ಈ ರೋಡ್ ಸಿಗ್ನಲ್‌ಗಳ ಬಗ್ಗೆ. ಇದು ಯಾವುದೋ ಕಾಲದಲ್ಲಿ ರೋಡ್ ಸಿಗ್ನಲ್‌ಗಳನ್ನು ಹಾಕಿರುವುದು. ರಾಷ್ಟ್ರೀಯ ಹೆದ್ದಾರಿ ಬಿಟ್ಟರೆ ಬೇರೆ ಯಾವ ರಸ್ತೆಗಳಲ್ಲೂ ರೋಡ್ ಸಿಗ್ನಲ್ಸ್ ಇಲ್ಲವೇ ಇಲ್ಲ. ಸರಿಯಾದ ರಸ್ತೆಗಳಂತೂ ಮೊದಲೇ ಇಲ್ಲ ಮತ್ತು ಅವುಗಳ ನಿರ್ವಹಣೆ ಕೂಡ ಸರಿಯಿಲ್ಲ. ಅದು ಬೇರೆ ವಿಷಯ. ಆದರೆ ಕನಿಷ್ಟ ರಾಜ್ಯ ಹೆದ್ದಾರಿಗಳಲ್ಲಿ, ಜಿಲ್ಲಾ ಹೆದ್ದಾರಿಗಳಲ್ಲಿ, ಒ.ಡಿ.ಆರ್., ಎಂ.ಡಿ.ಆರ್. ಗಳಲ್ಲಿ ಕೂಡ ಈ ರೋಡ್ ಸಿಗ್ನಲ್‌ಗಳು ಇರುವ ಹಾಗೆ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಮುಂಜಾಗರೂಕತಾ ಕ್ರಮ ತೆಗೆದುಕೊಳ್ಳದೇ ಹೋದರೆ, ಸುಮ್ಮನೆ ಏನೋ ಮಾಡಿದರೆ ಪ್ರಯೋಜನ ಆಗುವುದಿಲ್ಲ.

ಶ್ರೀ ಕೆ. ಅಭಯಚಂದ್ರ: ಇಷ್ಟು ಒಳ್ಳೆಯ ರಸ್ತೆಗಳು ಹಿಂದೆಲ್ಲೂ ಇರಲಿಲ್ಲ. ರಸ್ತೆಗಳ ಡಾಂಬರೀಕರಣಕ್ಕೆ ಈ ಸರ್ಕಾರ ಹೆಚ್ಚಿನ ಆದ್ಯತೆ ಕೊಟ್ಟಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಮಂತ್ರಿ): ಅಧ್ಯಕ್ಷರೇ, ಸನ್ಮಾನ್ಯ ಸಿಂಧ್ಯಾರವರು, ಭೈರೇಗೌಡರು, ಜ್ಞಾನೇಂದ್ರರವರು ಮತ್ತು ಪುಟ್ಟರಂಗನಾಥ್‌ರವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ ಈ ರೋಡ್ ಸೇಫ್ಟಿ ಕೌನ್ಸಿಲ್‌ನ ಅಧ್ಯಕ್ಷತೆ, ಅದರ ಉಸ್ತುವಾರಿಯನ್ನು ನನಗೆ ನೋಡಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಎರಡು ಬಾರಿ ಈ ಸಭೆಯನ್ನು ನಾವು ಕರೆದಿದ್ದೇವೆ. ಆದರೆ ಕೆಲವು ಜಿಲ್ಲಾ ಕೇಂದ್ರಗಳಿಂದ ಮಾಹಿತಿ ಬಾರದಿರುವ ಕಾರಣಕ್ಕೆ ಮುಂದೂಡುವುದಕ್ಕೆ ಅವಕಾಶ ಆಗಿತ್ತು. ಮಾನ್ಯ ಸಿಂಧ್ಯಾ ಹಾಗೂ ಭೈರೇಗೌಡರು ಹೇಳಿದ ಹಾಗೆ ಇದಕ್ಕೆ ಆರ್ಥಿಕವಾಗಿ ಸರ್ಕಾರಗಳು ಸಹಾಯ ಮಾಡುವುದಕ್ಕೆ ಮುಂದೆ ಬರುತ್ತಿಲ್ಲ. ಅಂದರೆ ಸರ್ಕಾರವೇ ಅದಕ್ಕೆ ಬೇಕಾದಂಥ ಹಣವನ್ನು ಒದಗಿಸಿಕೊಡಬೇಕು. ಈ ಉದ್ದೇಶದಿಂದ ಕೇಂದ್ರ ಸರ್ಕಾರದವರು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ (ಎನ್.ಡಿ.ಸಿ) ಮೀಟಿಂಗ್‌ನ್ನು ಒಂದು ಸಾರಿ ಕರೆದಿದ್ದರು. ಆ ಸಭೆಗೆ ನಾನು ಹೋಗಿದ್ದೆ. ಆ ಸಭೆಯಲ್ಲಿ ನಮ್ಮ ರಾಜ್ಯಕ್ಕೆ ಅಗತ್ಯವಾಗಿ ಬೇಕಾದಂಥ ಕೆಲವು ವಿಚಾರಗಳನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಕರ್ನಾಟಕ ರಾಜ್ಯ ಸರ್ಕಾರದಿಂದ ಪ್ರತಿನಿಧಿಸಿದಂಥ ಸಾರಿಗೆ ಮಂತ್ರಿಗಳು ಹೇಳಿರುವಂಥ ಎರಡು-ಮೂರು ವಿಚಾರಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿದೆ. ಅದರಲ್ಲೂ ವಿಶೇಷವಾಗಿ ಗ್ಯಾಸ್ ಆಧಾರದ ಮೇಲೆ ನಡೆಯುತ್ತಿರುವ ವಾಹನಗಳನ್ನು ಅನುಮತಿ ಇಲ್ಲದೆ ನಡೆಸುತ್ತಿರುವ ಬಗ್ಗೆ ಪರವಾನಿಗೆ ನೀಡುವಂಥಾದ್ದು ಹಾಗೂ ಕಾನೂನನ್ನು ತರುವಂಥಾದ್ದರ ಬಗ್ಗೆ ಏನು ಪ್ರಸ್ತಾವನೆಯನ್ನು ನಾವು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದೆವು, ಅದು ಪಾರ್ಲಿಮೆಂಟ್‌ನಲ್ಲಿ ವಿಷಯ ಪಂಡನೆಯಾಗಿ ರೂಲ್ಸ್ ಫ್ರೇಮ್ ಮಾಡುವ ಹಂತದಲ್ಲಿದೆ. ಇನ್ನು ಕೆಲವೇ ದಿವಸಗಳಲ್ಲಿ ಅದು ಜಾರಿಗೆ ಬರುವ ಸಾಧ್ಯತೆ ಇದೆ. ಅಧ್ಯಕ್ಷರೇ, ಈಗ ಜಿಲ್ಲಾ ಮಟ್ಟದಲ್ಲಿ ಇರುವ ಸಮಿತಿಗಳನ್ನು

ಸಹ ಶಕ್ತಿಶಾಲಿಯಾಗಿ ಮಾಡುವುದರ ಬಗ್ಗೆ ಮಾನ್ಯ ಸಿಂಧ್ಯಾರವರು ಸಲಹೆ ಕೊಟ್ಟಿದ್ದಾರೆ. ಅದರ ಕಾರ್ಯವ್ಯಾಪ್ತಿ, ಕಾರ್ಯ ಚಟುವಟಿಕೆ ಹಿಂದೆ ಏನು ನಡೆಯುತ್ತಿತ್ತೋ ಅದೇ ರೀತಿಯಾಗಿ ನಡೆಯುತ್ತಾ ಇರುವಂಥಾದ್ದು. ಆದರೆ ಇವತ್ತು ರಾಜ್ಯದಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿರುವುದರಿಂದ, ಅಪಘಾತಗಳನ್ನು ತಡೆಯುವುದರ ಜೊತೆಗೆ, ಅಪಘಾತಗಳನ್ನು ತಡೆಯುವಂಥ ಯಂತ್ರಗಳು ಬೇಕಾಗುವುದರ ಬಗ್ಗೆ ಈ ಒಂದು ರೋಡ್ ಸೇಫ್ಟಿ ಕೌನ್ಸಿಲ್ ಮೀಟಿಂಗ್‌ನಲ್ಲಿ ಹಿಂದೆ ವರದಿಯ ಮುಖಾಂತರ ತೆಗೆದುಕೊಂಡಿರುವಂಥ ಅಥವಾ ಸಭೆಗಳಲ್ಲಿ ತೆಗೆದುಕೊಂಡಿರುವಂಥ ನಿರ್ಣಯಗಳ ಮೇಲೆ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಳ್ಳಬೇಕಾಗಿದೆ. ಅನೇಕ ಸದಸ್ಯರುಗಳು ಅದರಲ್ಲೂ ವಿಶೇಷವಾಗಿ ಮಾನ್ಯ ಭೈರೇಗೌಡರು ಹೇಳಿದರು. ಡೇಂಜರ್ ಲೈಟಿನ ವ್ಯವಸ್ಥೆ ಇಲ್ಲದೇ ಇದ್ದಾಗ, ಅದನ್ನು ಸರಿಪಡಿಸಿದರೆ ಪ್ರಾಯಶಃ ಅಪಘಾತಗಳು ಆಗುವಂಥಾದ್ದು ಸಾಧ್ಯತೆ ಇದೆಯೆಂದು ಅವರು ಹೇಳಿದರು. ಡೇಂಜರ್ ಲೈಟ್‌ನ್ನು ಅಳವಡಿಸುವಂಥಾದ್ದೇ ಈ ಅಪಘಾತಗಳು ಆಗಬಾರದು, ಮುಂದೆ ವಾಹನಗಳು ಹೋಗುತ್ತಾ ಇರುವಂಥಾದ್ದು ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದ.

ಆದರೂ, ಕೆಲವೊಮ್ಮೆ ಈ ವ್ಯವಸ್ಥೆ ಇದ್ದಾಗಲೂ ಸಹ ಕೆಲವು ನ್ಯೂನತೆಗಳಿಂದ ಈ ಡೇಂಜರ್ ಲೈಟ್ ವ್ಯವಸ್ಥೆ ಇರುವುದಿಲ್ಲ. ಮಾನ್ಯ ಭೈರೇಗೌಡರು ನೀಡಿರುವಂಥ ಸಲಹೆ ಮೇರೆಗೆ, ಅಧಿಕಾರಿಗಳಿಗೆ ಕಟ್ಟುನಿಟ್ಟಾದ ಆದೇಶವನ್ನು ಕೊಟ್ಟು, ಆಲೋಚನೆ ಇಲ್ಲದೆ, ಇಂತಹ ವಾಹನಗಳನ್ನು ರಸ್ತೆ ಮೇಲೆ ಸಂಚರಿಸುವ ಬಗ್ಗೆ, ಡೇಂಜರ್ ಲೈಟ್ ಹಾಕುವುದು ಮತ್ತು ಇದಕ್ಕಿಂತ ಮುಖ್ಯವಾದುದು ಎಂದು ಹೇಳಿದರೆ, ಇವತ್ತು ಇಂಡಿಕೇಟರ್ ಎಂದು ಏನು ಹೇಳುತ್ತೇವೆ ಇದನ್ನು ಸಹ ಹಾಕದೇ ಇರುವಂಥ ಅನೇಕ ವಾಹನಗಳ ಮೇಲೆ ನಾವು ಮೊಕದ್ದಮೆಗಳನ್ನು ಹಾಕಿದ್ದೇವೆ. ಇದರ ಕಡೆ ಇನ್ನೂ ಹೆಚ್ಚಿನ ಗಮನವನ್ನು ಕೊಡುವುದರ ಜೊತೆಗೆ, ಈ ಅಪಘಾತಗಳನ್ನು ತಡೆಯುವ ಬಗ್ಗೆ, ನಮ್ಮ ರಸ್ತೆ ಸುರಕ್ಷತಾ ಸಮಿತಿಯ ಸಭೆಯನ್ನು ಕರೆಯುವುದರ ಜೊತೆಗೆ, ಜಿಲ್ಲೆಗಳ ಎಲ್ಲಾ ಜಿಲ್ಲಾಧಿಕಾರಿಗಳು ಇದರ ಅಧ್ಯಕ್ಷತೆ ವಹಿಸಿರುವಂಥ ಸಂದರ್ಭದಲ್ಲಿ ಅವರ ಮಾಹಿತಿಯನ್ನೆಲ್ಲಾ ಕ್ರೋಢೀಕರಿಸಿಕೊಂಡು, ಮುಂದಿನ ದಿನಗಳಲ್ಲಿ ಅಪಘಾತಗಳನ್ನು ತಡೆಯುವ ಬಗ್ಗೆ ಎಲ್ಲಾ ಪ್ರಯತ್ನಗಳನ್ನು ನಾನು ಮಾಡುತ್ತೇನೆಂದು ತಮ್ಮ ಮುಖಾಂತರ, ಮಾನ್ಯ ಸದಸ್ಯರುಗಳ ಗಮನಕ್ಕೆ ತರಲು ಇಷ್ಟಪಡುತ್ತೇನೆ.

6. ವಿತ್ತೀಯ ಕಾರ್ಯಕಲಾಪ

2001-2002ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ (ಮುಂದು)

ಅಧ್ಯಕ್ಷರು: ಈಗ ಬಜೆಟ್ ಮೇಲೆ ಮುಂದುವರೆದ ಚರ್ಚೆ, ಮಾನ್ಯ ವೈ.ಕೆ. ರಾಮಯ್ಯನವರೇ ಮುಂದುವರಿಸಿ. ನೀವು ನಿನ್ನೆ 57 ನಿಮಿಷ ಮಾತನಾಡಿದ್ದೀರಿ. ಇನ್ನೂ ನಿಮಗೆ ಎಷ್ಟು ಸಮಯ ಬೇಕಾಗಬಹುದು. ಇವತ್ತು ಬೆಳಿಗ್ಗೆ ಟೈಮಿಂಗ್ಸ್ ಹಾಕಿ ಕೊಟ್ಟಿದ್ದೆವು. ವಿರೋಧ ಪಕ್ಷದ ನಾಯಕರನ್ನು ಮತ್ತು ಆಡಳಿತ ಪಕ್ಷದವರನ್ನು ಕರೆದು, ಕೇಳಿ ಟೈಮಿಂಗ್ಸ್